ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	806
ಸದಸ್ಯರ ಹೆಸರು	ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	09.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಅಕ್ರಮ ಗಣಿಗಾರಿಕೆಯನ್ನು ಸಕ್ರಮ ಮಾಡಲು ಹೊರಟಿರುವ ಸರ್ಕಾರ ಸಕ್ರಮಕ್ಕೆ ಹಾಕುತ್ತಿರುವ ಮಾನದಂಡಗಳು ಯಾವುವು;	ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ಸಕ್ರಮ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
ಆ)	ಈಗಾಗಲೇ ಲೈಸೆನ್ಸ್ ಇಲ್ಲದೆ ಅಕ್ರಮವಾಗಿ ಗಣಿಗಾರಿಕೆ ಮಾಡಿರುವ ಹಾಗೂ ಮಾಡುತ್ತಿರುವವರ ವಿರುದ್ಧ ಯಾವ ಕ್ರಮಜರುಗಿಸಲಾಗಿದೆ;	ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡ ವಿಧಿಸಿ ಸಂಗ್ರಹಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತಿದೆ. ಅನಧಿಕೃತ ಕಲ್ಲುಗಣಿಗಾರಿಕೆ ಮತ್ತು ಮರಳು ಗಣಿಗಾರಿಕೆ ಸಂಬಂಧ ಕೈಗೊಂಡಿರುವ ಕ್ರಮಗಳ ವಿವರ ಕೆಳಕಂಡಂತಿದೆ:

ಕಲ್ಲುಗಣಿಗಾರಿಕೆ :- (ರೂ. ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ
1.	2018–19	413	108	1213.37
2.	2019–20	266	117	908.70
3.	2020–21	580	99	781.06
ಒಟ್ಟು		**1259**	**324**	**2903.13**

ಮರಳು ಗಣಿಗಾರಿಕೆ:- (ರೂ. ಲಕ್ಷಗಳಲ್ಲಿ)

ಕ್ರ ಸಂ.	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ
1.	2018–19	191	106	54.62
2.	2019–20	240	106	128.81
3.	2020–21	80	34	30.88
ಒಟ್ಟು		**511**	**246**	**214.31**

ಇ)	ಶಿವಮೊಗ್ಗ ಸೇರಿದಂತೆ ಚಿಕ್ಕಬಳ್ಳಾಪುರದಲ್ಲಿ ನಡೆದ ಭಾರಿ ಸ್ಫೋಟಕ ಹಿನ್ನೆಲೆಯಲ್ಲಿ ಆ ಎರಡು ಕ್ರಷರ್ ಮಾಲೀಕರು ಗಣಿಗಾರಿಕೆ ಲೈಸೆನ್ಸ್ ಹೊಂದಿದ್ದಾರೆಯೇ;	ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಸ್ಫೋಟಕ ಸಂಬಂಧ ಶ್ರೀ ಸುಧಾಕರ್ ಬಿ.ವಿ ರವರು ಯಾವುದೇ ಕಲ್ಲುಗಣಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ. ಆದರೆ ಸದರಿಯವರಿಗೆ ಕಲ್ಲುಗಂಗೂರು ಗ್ರಾಮದ ಸರ್ವೆ ನಂ. 2ರಲ್ಲಿ ಸ್ಟೋನ್ ಕ್ರಷರ್ ಘಟಕ ಸ್ಥಾಪನೆಗೆ ದಿನಾಂಕ 25.03.2019 ರಿಂದ ಅನ್ವಯವಾಗುವಂತೆ 20 ವರ್ಷಗಳ ಅವಧಿಗೆ ಲೈಸೆನ್ಸ್ ಮಂಜೂರು ಮಾಡಲಾಗಿದ್ದು, ಸ್ಫೋಟಕ ಘಟನೆ ನಡೆದ ನಂತರ ಸದರಿ ಕ್ರಷರ್ ಲೈಸೆನ್ಸ್ ನ್ನು ರದ್ದುಗೊಳಿಸಲಾಗಿರುತ್ತದೆ.
ಈ)	ಹೊಂದಿದ್ದಲ್ಲಿ, ಅವರ ಲೈಸೆನ್ಸ್ ಅನ್ನು ರದ್ದುಗೊಳಿಸುವ ಯೋಚನೆ ಸರ್ಕಾರದ ಗಮನದಲ್ಲಿದೆಯೇ;	ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಡೆದ ಸ್ಫೋಟಕ ಘಟನೆ ಸಂಬಂಧ ಮೆ॥ ಶ್ರೀ ಬ್ರಮರವಾಸಿನಿ ಎಂ-ಸ್ಯಾಂಡರ್ಸ್ ಎಲ್.ಎಲ್.ಪಿ ರವರಿಗೆ ಕ್ರಷರ್ ಘಟಕ ಸ್ಥಾಪನೆಗೆ ದಿನಾಂಕ 28.12.2015 ರಿಂದ 20 ವರ್ಷಗಳ ಅವಧಿಗೆ ಕ್ರಷರ್ ಲೈಸೆನ್ಸ್ ಮಂಜೂರು ಮಾಡಲಾಗಿರುತ್ತದೆ. ಸದರಿಯವರು ಮೆ॥ ಶಿರಿಡಿ ಸಾಯಿ ಅಗ್ರಿಗೇಟ್ಸ್ ಎಂಬ ಪಾಲುದಾರಿಕೆ ಸಂಸ್ಥೆಯಡಿ ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲ್ಲೂಕು, ಜನ್ನಾಲಕುಂಟೆ ಗ್ರಾಮದ ಸರ್ವೆ ನಂ. 11ರ 3-20ಎಕರೆ ಪ್ರದೇಶದಲ್ಲಿ ದಿನಾಂಕ 21.07.2010 ರಿಂದ 20 ವರ್ಷಗಳ ಅವಧಿಗೆ ಕಟ್ಟಡ ಕಲ್ಲುಗಣಿ ಗುತ್ತಿಗೆ ಸಂಖ್ಯೆ 100 ನ್ನು ಹೊಂದಿರುತ್ತಾರೆ. ಸದರಿ ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಪ್ರಕಾರ ಗಣಿಗಾರಿಕೆ ನಡೆಸದ ಕಾರಣ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8-K ರಂತೆ ಗಣಿಗಾರಿಕೆಯನ್ನು ನಿಲಂಬನೆಗೊಳಿಸಿ ದಿನಾಂಕ 03.03.2021 ರಂದು ಆದೇಶಿಸಿದೆ.
ಉ)	ಎರಡೂ ಸ್ಫೋಟಕಗಳಿಂದ ಜೀವ ಹಾನಿಯಾಗಿದ್ದು, ಇದಕ್ಕೆ ಇಲಾಖೆಯಿಂದ ಪರಿಹಾರ ನೀಡಲಾಗಿದೆಯೇ? (ಸಂಪೂರ್ಣ ಮಾಹಿತಿಯನ್ನು ವಿವರಣೆಗಳೊಂದಿಗೆ ನೀಡುವುದು)	ಶಿವಮೊಗ್ಗ ಜಿಲ್ಲೆ ಮತ್ತು ತಾಲ್ಲೂಕು, ಕಲ್ಲುಗಂಗೂರು ಗ್ರಾಮದಲ್ಲಿ ನಡೆದ ಸ್ಫೋಟಕದಲ್ಲಿ ಮೃತರಾದ 06 ಜನರಿಗೆ ತಲಾ ರೂ. 5.00 ಲಕ್ಷ ಪರಿಹಾರವನ್ನು ಸರ್ಕಾರದಿಂದ ಘೋಷಿಸಲಾಗಿದೆ. ಈ ಪೈಕಿ ಇಬ್ಬರು ಮೃತ ಕುಟುಂಬದ ವ್ಯಕ್ತಿಗಳಿಗೆ ಈಗಾಗಲೇ ಪರಿಹಾರ ವಿತರಣೆ ಮಾಡಲಾಗಿದೆ. ಮೃತಪಟ್ಟ ಆರು ಜನಗಳ ಪೈಕಿ ಆಂಧ್ರ ಪ್ರದೇಶದ ಮೂರು ಜನ ವ್ಯಕ್ತಿಗಳು ಮೃತಪಟ್ಟಿದ್ದು, ಆರನೇ ವ್ಯಕ್ತಿಯ ಮೃತ ದೇಹವನ್ನು ಗುರುತಿಸಲು ಸಾಧ್ಯವಾಗದೆ ಇರುವುದರಿಂದ ಸದರಿಯವರಿಗೆ ಪರಿಹಾರ ನೀಡುವ ಸಂಬಂಧ ಜಿಲ್ಲಾಡಳಿತದಿಂದ ಸರ್ಕಾರದ ನಿರ್ದೇಶನ ಕೋರಿದ್ದು, ಪರಿಶೀಲನೆಯಲ್ಲಿರುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆ, ಗುಡಿಬಂಡೆ ತಾಲ್ಲೂಕು, ಹಿರೇನಾಗವಲ್ಲಿ (ವರ್ಲಕೊಂಡ) ಗ್ರಾಮದಲ್ಲಿ ನಡೆದ ಸ್ಫೋಟಕ ಘಟನೆಯಲ್ಲಿ ಆರು ಜನ ಮೃತಪಟ್ಟಿದ್ದು, ಸರ್ಕಾರದಿಂದ ಮೃತ ಕುಟುಂಬದವರಿಗೆ ತಲಾ ರೂ.5.00 ಲಕ್ಷ ಪರಿಹಾರ ಘೋಷಿಸಲಾಗಿರುತ್ತದೆ.

ಸಂಖ್ಯೆ ಸಿಐ 117 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.